**ಕರ್ನಾಟಕ ಸರಕಾರ**

# ಅಪರ ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಐವಾನ್–ಇ–ಶಾಹಿ ಬಡಾವಣೆ, ಕಲಬುರಗಿ

**ವಿಷಯ:** ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಉತ್ತರ ವಲಯ, ಕಲಬುರಗಿಯನ್ನು ಈ ಹಿಂದಿನ ಡಯಟ್ ಕಮಲಾಪೂರ ಕಛೇರಿಗೆ ತಾತ್ಕಾಲಿಕವಾಗಿ ಸ್ಥಳಾಂತರಿಸುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ: ಇಪಿ 15 ಪಿಟಿಐ 2025 ದಿನಾಂಕ: 20.01.2025

*****

ಪೀಠಿಕೆ:

ಸದರಿ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಕಮಲಾಪೂರ, ಕಲಬುರಗಿ ಜಿಲ್ಲೆ ಈ ಸಂಸ್ಥೆಯನ್ನು ಉಲ್ಲೇಖಿತ ಪತ್ರದನ್ವಯ ಕಲಬುರಗಿಯ ಸರ್ಕಾರಿ ಪ್ರಾತ್ಯಕ್ಷಿಕ ಪ್ರೌಢಶಾಲೆ, ಕಲಬುರಗಿ ನಗರ ಇಲ್ಲಿಗೆ ಸ್ಥಳಾಂತರಿಸಲಾಗಿದೆ. ಸದರಿ ಡಯಟ್‌ನ ಸ್ಥಳಾಂತರದಿಂದ ಅದರ ಸಂಪೂರ್ಣ ಕಟ್ಟಡ ಖಾಲಿಯಾಗಿದ್ದು, ಬಳಕೆ ಇಲ್ಲದೇ ಹಾಳಾಗುತ್ತಿದೆ. ಇದನ್ನು ತಪ್ಪಿಸಲು ಹಾಗೂ ಪ್ರಸ್ತುತವಾಗಿ ಕಮಲಾಪೂರ ಕಂದಾಯ ತಾಲ್ಲೂಕು ಘೋಷಣೆಯಾಗಿರುವುದರಿಂದ ಒಂದು ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕಮಲಾಪೂರವನ್ನು ಅಲ್ಲಿನ ಹಳೆಯ ಡಯಟ್ ಕಟ್ಟಡದಲ್ಲಿ ಪ್ರಾರಂಭಿಸಬಹುದಾಗಿದೆ.

ಮುಂದುವರೆದು, ಸ್ಥಳಾಂತರವಾದ ಡಯಟ್ ಕಮಲಾಪೂರದ ಹಳೆಯ ಕಟ್ಟಡಕ್ಕೆ ಕಲಬುರಗಿ ಉತ್ತರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಕೆಲ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕಛೇರಿ, ಕಮಲಾಪೂರ ಇಲ್ಲಿಗೆ ಈ ಕೂಡಲೆ ನಿಯೋಜಿಸುವುದು ಸೂಕ್ತ ಎಂದು ಅಭಿಪ್ರಾಯಿಸಿದೆ. ಹಾಗೂ ಕಮಲಾಪೂರ ಕಂದಾಯ ತಾಲ್ಲೂಕು ವ್ಯಾಪ್ತಿಯ ಎಲ್ಲಾ ಸಿ.ಆರ್.ಸಿ ವಲಯಗಳನ್ನು ಒಳಗೊಳ್ಳುವಂತೆ ಸದರಿ ನೂತನ ಕಛೇರಿ ಕಾರ್ಯನಿರ್ವಹಿಸಬಹುದಾಗಿದೆ.

## ಆದೇಶ

**ಸಂಖ್ಯೆ** :ಸಿ7(2)/ಯೋ/ಡಯಟ್.ಸ್ಥಳಾಂತರ/04/2024–25 ದಿನಾಂಕ:15–04–2025

ನೂತನವಾಗಿ ಘೋಷಿಸಲಾಗಿರುವ ಕಮಲಾಪೂರ ಕಂದಾಯ ತಾಲ್ಲೂಕಿನಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕಮಲಾಪೂರ ಅನ್ನು ಪ್ರಸ್ತುತ ಸ್ಥಳಾಂತರಗೊಂಡ ಡಯಟ್ ಕಮಲಾಪೂರ ಕಟ್ಟಡ ಇಲ್ಲಿ ಪ್ರಾರಂಭಿಸಲು ಈ ಮೂಲಕ ಆದೇಶಿಸಿದೆ. ಕಮಲಾಪೂರ ಕಂದಾಯ ತಾಲ್ಲೂಕು ವ್ಯಾಪ್ತಿಯ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಉತ್ತರ ವಲಯ ಇವರನ್ನು ಮುಂದಿನ ಆದೇಶದ ವರೆಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕಮಲಾಪೂರ ಎಂದು ಹೆಚ್ಚಿನ ಪ್ರಭಾರದಲ್ಲಿರಿಸಿ ಈ ಮೂಲಕ ಆದೇಶಿಸಿದೆ.

Akash 15·04·25

**(ಡಾ. ಆಕಾಶ ಎಸ್. ಭಾ.ಆ.ಸೇ)**
ಅಪರ ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ.

**ಪ್ರತಿಗಳು:**

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01, ಸದರಿ ನೂತನ ಕಛೇರಿಗೆ ಬೇಕಾಗುವ ಅಧಿಕಾರಿ/ಸಿಬ್ಬಂದಿಗಳನ್ನು ಹುದ್ದೆ ಸ್ಥಳಾಂತರದ ಮೂಲಕ ಒದಗಿಸಬಹುದಾಗಿದೆ ಈ ನಿಟ್ಟಿನಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು.
2) ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
3) ಮಾನ್ಯ ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಕಲಬುರಗಿ.
4) ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ಬೆಂಗಳೂರ.
5) ನಿರ್ದೇಶಕರು, ರಾಜ್ಯ ಶಿಕ್ಷಣ, ಸಂಶೋಧನೆ ಮತ್ತು ತರಬೇತಿ ಇಲಾಖೆ, ಹೊಸಕೇರಿಹಳ್ಳಿ ಬೆಂಗಳೂರು
6) ಶ್ರೀ ಬಸವರಾಜ ಬಿ. ಮತ್ತಿಮುಡ ಮಾನ್ಯ ಶಾಸಕರು ಕಲಬುರಗಿ ಗ್ರಾಮೀಣ ವಿಧಾನಸಭಾ ಕ್ಷೇತ್ರ-43 ಕಲಬುರಗಿ ಜಿಲ್ಲೆ, ಸದರಿ ನೂತನ ಕಛೇರಿಗೆ ಹಾಗೂ ತಮ್ಮ ಮತಕ್ಷೇತ್ರವಾದ ಶಾಹಬಾದ ತಾಲೂಕಿನಲ್ಲಿಗೆ ಸೇರಿ 2 ವಾಹನಗಳನ್ನು ಕೆ.ಕೆ.ಆರ್.ಡಿ.ಬಿ ಅನುದಾನದಲ್ಲಿ ಒದಗಿಸುವಂತೆ ಕೋರಿದೆ.
7) ಉಪ ನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ,
8) ಉಪ ನಿರ್ದೇಶಕರು (ಅಭಿವೃದ್ಧಿ) ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಸರ್ಕಾರಿ ಪ್ರಾತ್ಯಕ್ಷಿಕ ಪ್ರೌಢಶಾಲೆ, ಕಲಬುರಗಿ. ಡಯಟ್ ಕಮಲಾಪೂರ ಕಟ್ಟಡವನ್ನು ಹಸ್ತಾಂತರ ಮಾಡಲು ಸೂಚಿಸಿದೆ.
9) **ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ, ಉತ್ತರ ವಲಯ ಕಲಬುರಗಿ ಇವರ ಸೂಕ್ತ ಕ್ರಮಕ್ಕಾಗಿ (ದಿನಾಂಕ: 25.04.2025ರ ಒಳಗಾಗಿ), ತಮ್ಮ ಕಛೇರಿಯ ಕೆಲ ಸಿಬ್ಬಂದಿಗಳನ್ನು ನೂತನವಾಗಿ ಪ್ರಾರಂಭಿಸಲಾಗುವ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕಮಲಾಪೂರ ಇಲ್ಲಿಗೆ ಕೂಡಲೆ ನಿಯೋಜಿಸಲು ತಿಳಿಸಿದೆ. ಹಾಗೂ ದಿನಾಂಕ:25.04.2025 ರಿಂದಲೇ ಸದರಿ ಕಟ್ಟಡದಲ್ಲಿ ಕಾರ್ಯ ನಿರ್ವಹಣೆ ಮಾಡಲು ಸೂಚಿಸಿದೆ.**
10) ಕಛೇರಿ ಪ್ರತಿ.